


# ಭೀಮವ್ವನ ಬೊಂಬೆಯಾಟ

**ಕೊಪ್ಪಳ ತಾಲ್ಲೂಕಿನ ಮೋರನಾಳದ ಭೀಮವ್ವ ಶಿಳ್ಳೇಕ್ಯಾತರ ಅವರ ಮುಕುಟದಲ್ಲೀಗ 'ಪದ್ಮಶ್ರೀ' ತುರಾಯಿ. ಈ ಶತಾಯುಷಿ ಅಜ್ಜಿ ಗೊಂಬೆಗಳನ್ನು ಕುಣಿಸಿ ಪ್ರಸಂಗ ಕಟ್ಟುವಷ್ಟೇ ಸಲೀಸಾಗಿ ಹಾಡುಗಳ ಹೊಳೆ ಹರಿಸಬಲ್ಲಳು. ತೊಗಲು ಗೊಂಬೆಯಾಟದ ರಾಯಭಾರಿಯಂತೆ ಕಾಣಿಸುವ ಅಜ್ಜಿಗೆ ಸಂದಿರುವ ಪುರಸ್ಕಾರ, ಆಟದ ಪುನರುತ್ಥಾನಕ್ಕೆ ದಾರಿ ಮಾಡಿ ಕೊಡಬಲ್ಲದೆ?**

■ ಪ್ರಮೋದ ಕುಲಕರ್ಣಿ

ಚಿತ್ರಗಳು: ಭರತ್ ಕಂದಕೂರ

'ಹೋಗಿ ಬರಲೇನೆ, ಮೋಜಿನ ತವರಿಗೆ? ಹೋಗುತ್ತಲೆ ಅಲ್ಲಿಯೇ ವಸ್ತಿ ಉಳಿಯಲೇನೇ?'

ತನ್ನ ಸುತ್ತಲೂ ಕುಳಿತಿದ್ದ ಮೊಮ್ಮಕ್ಕಳ ಜೊತೆ ಹೀಗೆ ಸುಶ್ರಾವ್ಯವಾಗಿ ಹಾಡುತ್ತಿದ್ದಳು 'ಪದ್ಮಶ್ರೀ' ಪ್ರಶಸ್ತಿ ಪುರಸ್ಕೃತ ತೊಗಲು ಗೊಂಬೆಯಾಟ ಕಲಾವಿದೆ ಭೀಮವ್ವ ಶಿಳ್ಳೇಕ್ಯಾತರ.

ಶತಾಯುಷಿ ಅಜ್ಜಿಯ ಮುಖ ವಯೋಸಹಜ ಸುಕ್ಕುಗಟ್ಟಿತ್ತು. ದೃಷ್ಟಿ ಮಂದವಾಗಿತ್ತು. ಆದರೆ ಧ್ವನಿ ಮಾತ್ರ ಕಂಚಿನ ಕಂಠ. ಹಾಡುತ್ತಿದ್ದರೆ ನಿರಂತರವಾಗಿ ಕೇಳುತ್ತಲೇ ಇರಬೇಕು ಎನ್ನುವಂತೆ ಅಜ್ಜಿ ಜಾನಪದ, ರಾಮಾಯಣ, ಮಹಾಭಾರತದ ಕಥನಗಳನ್ನು ಹಾಡಿನ ರೂಪಕ್ಕಿಳಿಸುತ್ತಿದ್ದರು.

ಹೀಗೆ ಸಾವಿರಾರು ಹಾಡುಗಳನ್ನು ಹಾಡಿ ಜನರನ್ನು ರಂಜಿಸಿರುವ ಅಜ್ಜಿ, ಗೊಂಬೆಗಳ ಮೂಲಕ ಜನರ ಮನಸ್ಸನ್ನೂ ಗೆದ್ದಿದ್ದಾರೆ. ಕೊಪ್ಪಳ ತಾಲ್ಲೂಕಿನ ಮೋರನಾಳ ಎನ್ನುವ ಪುಟ್ಟ ಗ್ರಾಮ ಅಜ್ಜಿಯ ಕಲಾತಪಸ್ಸಿನ ಕಾರಣದಿಂದಾಗಿ ಈಗ ದೇಶಕ್ಕೆ ಪರಿಚಿತವಾಗಿದೆ.

ಪದ್ಮಶ್ರೀ ಪುರಸ್ಕಾರಕ್ಕೆ ಪಾತ್ರವಾಗುವ ಮೂಲಕ ಸುದ್ದಿಯಲ್ಲಿರುವ ಅಜ್ಜಿಯ ಹೆಸರು ಭೀಮವ್ವ ಶಿಳ್ಳೇಕ್ಯಾತರ. ಆಕೆಗೀಗ 103 ವರ್ಷ!

ಹದಿನಾಲ್ಕನೇ ವಯಸ್ಸಿನಿಂದಲೇ ಗೊಂಬೆಗಳನ್ನು ಆಡಿಸುವುದನ್ನು ಭೀಮವ್ವ ವೃತ್ತಿಯಾಗಿ ಮಾಡಿಕೊಂಡಿದ್ದಾರೆ. ಭೀಮವ್ವ ಅವರ ಪತಿ ದಿವಂಗತ ದೊಡ್ಡಬಾಳಪ್ಪ ಕೂಡ ಇದೇ ಕಲಾವಿದರು. ಇವರ ಮಕ್ಕಳು, ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಕ್ಕಳು ಗೊಂಬೆ ಆಡಿಸುವ ಕಲೆ ರೂಢಿಸಿಕೊಂಡಿದ್ದಾರೆ.

ಆಧುನಿಕ ಯುಗದ ಭರಾಟೆಯಲ್ಲಿ, ಮೊಬೈಲ್ ಹಾಗೂ ಸಾಮಾಜಿಕ ತಾಣಗಳ ವ್ಯಾಪಕ ಬಳಕೆಯ ನಡುವೆಯೂ ಶಿಳ್ಳೇಕ್ಯಾತರ ಕುಟುಂಬ ತೊಗಲಿನ ಗೊಂಬೆಗಳನ್ನು ಆಡಿಸುವುದರಲ್ಲಿ ಬದುಕು ಕಟ್ಟಿಕೊಂಡಿದೆ. ಕಲೆಯನ್ನೂ ಎತ್ತರಕ್ಕೆ ಏರಿಸಿದೆ.

ಜಿಂಕೆಯ ತೊಗಲು ಬಳಸಿ ತಯಾರಿಸುವ ಬೊಂಬೆಗಳನ್ನು ಕುಣಿಸುತ್ತ ರಾಮಾಯಣ, ಮಹಾಭಾರತ ಪ್ರಸಂಗಗಳನ್ನು ಪ್ರಸ್ತುತಪಡಿಸುವ ಭೀಮವ್ವ ಈ ಕಲೆಯಲ್ಲಿ ಸಾಕಷ್ಟು ಅನುಭವ ಪಡೆದಿದ್ದಾರೆ. ಗೊಂಬೆಗಳನ್ನು ತಯಾರಿಸುವಾಗ ಆ ಚಿತ್ರಗಳನ್ನು ಅಂದವಾಗಿ ಬರೆದು – ಆಭರಣ, ಸೀರೆಯ ಅಂಚು, ರಥದ ಚಕ್ರ, ಕಿರೀಟ ಇತ್ಯಾದಿ ಕುಸುರಿ ಕೆಲಸಗಳನ್ನು ಸೂಕ್ಷ್ಮವಾಗಿ ತಯಾರಿಸುವ ಕೌಶಲ ಅಜ್ಜಿಗೆ ಗೊತ್ತಿದೆ. ಆರೇಳು ದಶಕಗಳ ಹಿಂದೆ ತಯಾರಿಸಲಾಗಿದ್ದ ಗೊಂಬೆಗಳೇ ಈಗಲೂ ಅಜ್ಜಿಯ ಕೈಯಲ್ಲಿ ಕುಣಿಯುತ್ತಿವೆ.

## ವಿದೇಶಗಳಲ್ಲಿಯೂ ಗೊಂಬೆಗಳ ಮೋಡಿ

1970–80ರ ದಶಕಗಳಲ್ಲಿ ಊರಿನ ಜಾತ್ರೆಗಳು, ಉತ್ಸವಗಳಲ್ಲಿ ಊರೂರು ಅಲೆದಾಡಿ ಅಜ್ಜಿ ಕಲಾ ಪ್ರದರ್ಶನ ನೀಡಿದ್ದಾರೆ. ಅಮೆರಿಕ, ಪ್ಯಾರಿಸ್, ಇಟಲಿ, ಇರಾನ್, ಇರಾಕ್, ಸ್ವಿಟ್ಜರ್‌ಲೆಂಡ್, ಹಾಲೆಂಡ್ ಹೀಗೆ ಅನೇಕ ದೇಶಗಳಲ್ಲಿ ರಾಮಾಯಣ, ಮಹಾಭಾರತದಂತಹ